ಇ. ಹೌದು.

ಈ. ಕಾರ್ಮಿಕ ಆಯುಕ್ತರೊಂದಿಗೆ ಸಮಾಲೋಚನೆಯಲ್ಲಿದೆ.

ಮೇಣದಂತಹ ಕಚ್ಚಾ ಸಾಮಗ್ರಿಯ ಕಡಿಮೆ ಪೂರೈಕೆಯಿಂದ ಸಣ್ಣ ಕೈಗಾರಿಕೆಗಳಿಗೆ ನಷ್ಟವಾಗುತ್ತಿರುವುದರ ಬಗ್ಗೆ

1838: ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೇಣದಂತಹ ಕಚ್ಚಾ ಸಾಮಗ್ರಿಯ ಕಡಿಮೆ ಪೂರೈಕೆಯಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹೆಚ್ಚಿನ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ರಾಜ್ಯದ ಮೇಣದ ಹಾಲಿ ಕೋಟಾ ಪ್ರಮಾಣ ಎಷ್ಟು;

ಇ. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಬೇಕಾಗಬಹುದಾದ ಮೇಣದ ಪ್ರಮಾಣದ ಮೊತ್ತ ಎಷ್ಟು;

ಈ. ಕೋಟಾ ಪ್ರಮಾಣವನ್ನು ಹೆಚ್ಚಿಸುವಂತೆ ಸರ್ಕಾರವು ಕೇಂದ್ರವನ್ನು ಕೋರಲಾಗಿದೆಯೇ;

ಉ. ಹಾಗಿದ್ದಲ್ಲಿ ಆದರ ವಿವರಗಳು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):–

ಅ. ಹೌದು.

ಆ. ವಾರ್ಷಿಕ 2,400 ಟನ್.

ಇ. ವಾರ್ಷಿಕ ಸುಮಾರು 6,900 ಟನ್‌ಗಳು.

ಈ. ಹೌದು.

ಉ. ವಾರ್ಷಿಕ 5,000 ಟನ್ ಮೇಣವನ್ನು ಸರಬರಾಜು ಮಾಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ಮಂಗಳೂರು ಸಮೀಪದ ತೂಬೆ ಅಣೆಕಟ್ಟಿನ ಕಾರ್ಯ ಕುರಿತು

1950: ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಮಂಗಳೂರು ಸಮೀಪದ ತೂಬೆ ಅಣೆಕಟ್ಟಿನ ಕಾರ್ಯ ಸಂಪೂರ್ಣವಾಗಿದೆಯೇ;

2. ಈ ಅಣೆಕಟ್ಟಿಗೆ ಆಗಿರುವ ಒಟ್ಟು ಖರ್ಚು ಎಷ್ಟು;

3. ಮಂಗಳೂರು ನಗರಕ್ಕೆ ಮುಂದಿನ ತಿಂಗಳುಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗಲಿದೆಯೇ ? ತೂಬೆ ಅಣೆಕಟ್ಟಿನ ನೀರು ಸರಾಗವಾಗಿ ವಿತರಣೆಯಾಗುವುದೇ;

4. ನೀರಿನ ಭಾರಿ ಕೊರತೆ ಇರುವ ಬಜಾಲ್ ಗ್ರಾಮಕ್ಕೂ ಅದೇ ಅಣೆಕಟ್ಟಿನ ನೀರನ್ನು ಕೊಡುವಂತಹ ವಿಪ್ಪಾಡು ಮಾಡಲಾಗುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಶೇಕಡ 95ರಷ್ಟು ಕಾಮಗಾರಿ ಪೂರ್ಣವಾಗಿದೆ.

2. ರೂ.1,89,51,980-00

3. ತೊಂದರೆಯಾಗುವ ಸಾಧ್ಯತೆ ಇಲ್ಲ. ಪಂಪುಗಳು ಆಗಾಗ್ಗೆ ಬರುವ ಯಾಂತ್ರಿಕ ತೊಂದರೆ ಮತ್ತು ವಿದ್ಯುಚ್ಛಕ್ತಿ ಅಡಚಣೆ ಬಿಟ್ಟರೆ ಅಣೆಕಟ್ಟಿನ ನೀರು ಸರಾಗವಾಗಿ ವಿತರಣೆಯಾಗುವುದು.

4. ಈಗಿರುವ ವಿತರಣಾ ವ್ಯವಸ್ಥೆಯಲ್ಲಿ ಬಜಾಲ್ ಗ್ರಾಮಕ್ಕೂ ಕುಡಿಯುವ ನೀರನ್ನು ಸರಬರಾಜು ಮಾಡುವಂತಹ ವಿರ್ಪಾಡು ಮಾಡಲಾಗಿದೆ.

ಅಪೂರ್ಣವಾಗಿರುವ ಹುಡ್ಕೋ ಯೋಜನೆಯ ಮನೆಗಳ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ

1951: ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆಶ್ರಯ ಯೋಜನೆ ಅನುಷ್ಠಾನಗೊಳಿಸುವ ಮೊದಲು ಮಂಜೂರಾದ ಎಷ್ಟು ಹುಡ್ಕೋ ಯೋಜನೆಯ ಮನೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಪೂರ್ಣವಾಗಿವೆ; (ತಾಲ್ಲೂಕುವಾರು ವಿವರ ನೀಡುವುದು);

ಆ. ಅವುಗಳನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು; ಪೂರ್ಣಗೊಳಿಸದೇ ಇದ್ದಲ್ಲಿ ಆಗುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ; ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):–

ಅ. ಅಪೂರ್ಣ ಮನೆಗಳ ಸಂಖ್ಯೆ 1510

ಮಂಗಳೂರು	202
ಸುಳ್ಯಾ	163
ಉಡುಪಿ	277
ಪುತ್ತೂರು	231
ಕಾರ್ಕಳ	175
ಕುಂದಾಪುರ	100
ಬೆಳ್ತಂಗಡಿ	145
ಬಂಟ್ವಾಳ	217
ಒಟ್ಟು	1510

ಆ. ಪೂರ್ಣಗೊಳಿಸಲು 97.198 ಲಕ್ಷ ರೂ.ಗಳು ಬೇಕಾಗುತ್ತದೆ. ಅಪೂರ್ಣ ಮನೆಗಳನ್ನು ಪೂರ್ಣಗೊಳಿಸಲು ಜೂನ್ ತಿಂಗಳೊಳಗೆ ರೂ.49.48 ಲಕ್ಷ ರೂ. ಬಿಡುಗಡೆ ಮಾಡಲಾಗುತ್ತದೆ. ಉಳಿದ ಹಣವನ್ನು ಪ್ರಗತಿ ಆಧರಿಸಿ ಹುಡ್ಕೋದಿಂದ ಬಿಡುಗಡೆ ಹೊಂದಲು ಕ್ರಮ ಕೈಗೊಳ್ಳಲಾಗುವುದು.